ಬೆಂಗಳೂರಿನ ರಾಜಾಜಿನಗರದಲ್ಲಿರುವ ಜಿ.ಕೆ.ಡಬ್ಲ್ಯೂ. ಕಾರ್ಖಾನೆ ಮುಚ್ಚಿರುವುದರಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ.

2288(2715) ಶ್ರೀ ಸುರೇಶ್‌ಕುಮಾರ್ ಎಸ್. (ರಾಜಾಜಿನಗರ) :— ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ರಾಜಾಜಿನಗರ ವಿಧಾನ ಸಭಾ ವ್ಯಾಪ್ತಿಯಲ್ಲಿರುವ ಜಿ.ಕೆ.ಡಬ್ಲ್ಯೂ ಕಾರ್ಖಾನೆ ಕಳೆದ ಎಷ್ಟು ತಿಂಗಳಿಂದ ಮುಚ್ಚಿರುತ್ತದೆ;

2. ಅಲ್ಲಿರುವ ಕಾರ್ಮಿಕರಿಗೆ ನೆರವು ನೀಡುವ ದಿಕ್ಕಿನಲ್ಲಿ ಸರ್ಕಾರ ಕೈಗೊಂಡ ಕ್ರಮ ಏನು?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :—

1. ರಾಜಾಜಿನಗರಲ್ಲಿರುವ ಜಿ.ಕೆ.ಡಬ್ಲ್ಯೂ ಕಾರ್ಖಾನೆಯು ದಿನಾಂಕ 17-1-2000 ರಿಂದ ಮುಚ್ಚಲ್ಪಟ್ಟಿರುತ್ತದೆ.

2. ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

ಅ) ಆಡಳಿತವರ್ಗದವರು ಕಾರ್ಖಾನೆಯನ್ನು ಮುಚ್ಚಲು ಅನುಮತಿಯನ್ನು ಕೋರಿ ಸಲ್ಲಿಸಿದ ಅರ್ಜಿಯನ್ನು ಸರ್ಕಾರವು ತಿರಸ್ಕರಿಸಿರುತ್ತದೆ.

ಆ) ವಿವಿಧ ಬೇಡಿಕೆಗಳ ಬಗ್ಗೆ ಉದ್ಭವಿಸಿದ ವಿವಾದವನ್ನು ಸರ್ಕಾರವು ಕಾರ್ಮಿಕ ನ್ಯಾಯಾಲಯಕ್ಕೆ ನ್ಯಾಯ ನಿರ್ಣಯಕ್ಕಾಗಿ ಕಳುಹಿಸಿರುವುದರ ಜೊತೆಗೆ ಮುಂದುವರೆಯುತ್ತಿರುವ ಬೀಗಮುದ್ರೆಯನ್ನು ಸರ್ಕಾರವು ನಿಷೇದಿಸಿದೆ.

ಇ) ಕಾರ್ಮಿಕರು ಮುಷ್ಕರವನ್ನು ಹಿಂತೆಗೆದುಕೊಂಡು ದಿನಾಂಕ: 17-1-2000ರಂದು ಕೆಲಸಕ್ಕೆ ಹಾಜರಾಗಲು ಹೋದಾಗ ಆಡಳಿತ ವರ್ಗದವರು ಕೆಲಸವನ್ನು ನೀಡಲು ನಿರಾಕರಿಸಿದ ಕಾರಣ, ಈ ನ್ಯಾಯಬಾಹಿರ ಕಾರ್ಖಾನೆ ಮುಚ್ಚುವಿಕೆಯಿಂದ ಕಾರ್ಮಿಕರಿಗೆ ಬರಬೇಕಾದ ರೂ. 1,15,55,656-00 (ರೂಪಾಯಿ ಒಂದು ಕೋಟಿ ಹದಿನೈದು ಲಕ್ಷ ಐವತ್ತೈದು ಸಾವಿರದ ಆರುನೂರ ಐವತ್ತ ಆರು ಮಾತ್ರ) ವಸೂಲಿ ಮಾಡಲು ಕೋರಿಕೊಂಡ ಅನುಗುಣವಾಗಿ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿ, ಬೆಂಗಳೂರು ನಗರಜಿಲ್ಲೆ, ಬೆಂಗಳೂರು ರವರಿಗೆ ದಿನಾಂಕ: 8-1-2001ರಂದು ನೀಡಲಾಗಿರುತ್ತದೆ. ಅದರ ಉಚ್ಚ ನ್ಯಾಯಾಲಯವು ದಿನಾಂಕ: 8-1-2000ರಂದು ನೀಡಿದ ಪ್ರಮಾಣ ಪತ್ರದ ಅನುಗುಣವಾಗಿ ಹಣವನ್ನು ವಸೂಲಿ ಮಾಡಬಾರದೆಂದು ಆಂತರೀಕ ಆದೇಶವನ್ನು ದಿನಾಂಕ: 31-1-2001ರಂದು ನೀಡಿರುತ್ತದೆ.

ಈ. ಕಾರ್ಮಿಕ ಸಂಘದವರು ದಿನಾಂಕ: 1-7-2000 ರಿಂದ 31-12-2000ದ ಅವಧಿಗೆ ಬರತಕ್ಕ ಹಣ ವಸೂಲಾತಿಗಾಗಿ ದಿನಾಂಕ: 5-3-2001 ರಂದು ಸಲ್ಲಿಸಿದ ಕ್ಲೈಮ್ ಅರ್ಜಿಯು ಪರಿಶೀಲನೆಯಲ್ಲಿರುತ್ತದೆ.

ಉ. ಸರ್ಕಾರವು ಆಡಳಿತ ವರ್ಗದವರು ಕಾರ್ಖಾನೆ ಮುಚ್ಚಲು ಅನುಮತಿ ಕೋರಿ ಸಲ್ಲಿಸಿದ ಅರ್ಜಿಯು ದಿನಾಂಕ 17-12-99ರಂದು ತಿರಸ್ಕರಿಸಿದ್ದರೂ, ಆಡಳಿತ ವರ್ಗದವರು ಕಾರ್ಖಾನೆಯನ್ನು ಪುನರಾರಂಭಿಸದೆ ಕೈಗಾರಿಕಾ ವಿವಾದ ಕಾಯ್ದೆ 1947 ಕಲಂ 25 (ಓ) ಅನ್ನು ಉಲ್ಲಂಘಿಸಿದ್ದಕ್ಕಾಗಿ ಮೊಕದ್ದಮೆ ಮಾಡಲು ಅನುಮತಿ ನೀಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಊ) ಆಡಳಿತ ವರ್ಗವು ಕಾರ್ಖಾನೆಯನ್ನು ಮುಚ್ಚಲು ಅನುಮತಿ ಕೋರಿ ಸರ್ಕಾರಕ್ಕೆ ದಿನಾಂಕ: 30-6-2001ರಂದು ಅರ್ಜಿ ಸಲ್ಲಿಸಿದ್ದು ಅರ್ಜಿಯು ಇನ್ನೂ ಪರಿಶೀಲನೆಯಲ್ಲಿರುವುದರಿಂದ ಕಾರ್ಖಾನೆಯ ಅರ್ಜಿಯನ್ನು ದಿನಾಂಕ: 6-7-2001ರಂದು ಹಿಂತಿರುಗಿಸಿದೆ.

ರಾಜ್ಯದಲ್ಲಿ ತ್ವರಿತಗತಿ ನ್ಯಾಯಾಲಯಗಳ ಸ್ಥಾಪನೆ.

2289(2716) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) :— ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಎಷ್ಟು ತ್ವರಿತಗತಿ ನ್ಯಾಯಾಲಯಗಳನ್ನು (ಫಾಸ್ಟ್ ಟ್ರ್ಯಾಕ್ ಕೋರ್ಟ್ಸ್) ಸ್ಥಾಪಿಸಲು ಉದ್ದೇಶಿಸಲಾಗಿದೆ.

ಆ) ಇದರಿಂದ ಆಗುವ ಉಪಯೋಗವೇನು?

ಇ) ಸಾಮಾನ್ಯ ನ್ಯಾಯಾಲಯಕ್ಕೂ ಈ ತ್ವರಿತ ನ್ಯಾಯಾಲಯಕ್ಕೂ ಕಾರ್ಯವೈಖರಿಯಲ್ಲಿ ಇರುವ ವ್ಯತ್ಯಾಸವೇನು?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :—

ಅ) ಉಚ್ಚ ನ್ಯಾಯಾಲಯದಿಂದ ರಾಜ್ಯದಲ್ಲಿ 150 ತ್ವರಿತಗತಿ ನ್ಯಾಯಾಲಯಗಳನ್ನು ಸ್ಥಾಪಿಸಲು ಪ್ರಸ್ತಾವನೆ ಬಂದಿದ್ದು, ಮೊದಲನೇ ಹಂತವಾಗಿ, ಸರ್ಕಾರಿ ಆದೇಶ ಸಂಖ್ಯೆ ಲಾ: 369 : ಎಲ್‌ಎಎಂ : 2000, ದಿನಾಂಕ : 29-5-2001 ರಲ್ಲಿ ರಾಜ್ಯದಲ್ಲಿ 13 ಫಾಸ್ಟ್ ಟ್ರ್ಯಾಕ್ ನ್ಯಾಯಾಲಯಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ, ಈ ನ್ಯಾಯಾಲಯಗಳು ಅಧ್ಯಕ್ಷಾಧಿಕಾರಿಗಳನ್ನು ನೇಮಕ ಮಾಡಿದ ದಿನಾಂಕದಿಂದ ಕರ್ತವ್ಯ ನಿರತವಾಗುತ್ತವೆ, ಸದರಿ ನ್ಯಾಯಾಲಯಗಳಿಗೆ ಅಧ್ಯಕ್ಷಾಧಿಕಾರಿಗಳನ್ನು ನೇಮಕಾತಿ ಮಾಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.